ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ: ಸಿ7(8)/ಆರ್.ಟಿ.ಇ./ಶು.ಮ./ತಂತ್ರಾಂಶ/2019-20 ದಿನಾಂಕ: 11-12-2020

## ::ಸುತ್ತೋಲೆ::

ವಿಷಯ : 2019-20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿಗೆ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸದ ಶಾಲೆಗಳಿಗೆ ಮತ್ತು 2019-20ನೇ ಸಾಲಿನ ಶುಲ್ಕ ಮರುಪಾವತಿಗೆ ಅಪೀಲು ಹೋಗಬಯಸುವ ಶಾಲೆಗಳಿಗೆ ತಂತ್ರಾಂಶ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ : 1. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 05-06-2020
2. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 07-07-2020
3. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 10-08-2020
4. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 08-09-2020
5. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 09-10-2020

&&&&&&

ವಿಷಯದನ್ವಯ ಶಿಕ್ಷಣ ಹಕ್ಕು ಕಾಯ್ದೆ 2009ರ ಸೆಕ್ಷನ್ 12(1)(ಸಿ) ರಡಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ 2019-20ನೇ ಸಾಲಿನ ಶುಲ್ಕ ಮರುಪಾವತಿಗೆ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸಲು ಉಲ್ಲೇಖ(4)ರ ಸುತ್ತೋಲೆಯಂತೆ ದಿನಾಂಕ : 23-09-2020 ರವರೆಗೆ ತಂತ್ರಾಂಶ ಬಿಡುಗಡೆ ಮಾಡಲಾಗಿತ್ತು. ಆದರೂ 454 ಶಾಲೆಗಳು ಬೇಡಿಕೆ ಸಲ್ಲಿಸದೇ ಇರುವುದು ಕಂಡುಬಂದಿರುತ್ತದೆ.

ಉಲ್ಲೇಖ (5) ರ ಸುತ್ತೋಲೆಯಂತೆ 2019-20ರ ಶುಲ್ಕ ಮರುಪಾವತಿಗೆ ಅಪೀಲು ಹೋಗ ಬಯಸುವ ಶಾಲೆಗಳಿಗಾಗಿ ಅಪೀಲು ತಂತ್ರಾಂಶವನ್ನು ದಿನಾಂಕ : 09-10-2020 ರಿಂದ 23-10-2020ರ ವರೆಗೆ ಬಿಡುಗಡೆ ಮಾಡಲಾಗಿತ್ತು. ಈಗಲೂ ಕೆಲವು ಶಾಲೆಗಳಿಂದ ಅಪೀಲು ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶ ನೀಡುವಂತೆ ಮನವಿಗಳು ಸ್ವೀಕೃತವಾಗುತ್ತಿವೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 2019-20 ರ ಶುಲ್ಕ ಮರುಪಾವತಿ ತಂತ್ರಾಂಶ ಮತ್ತು 2019-20ರ ಅಪೀಲು ತಂತ್ರಾಂಶಗಳ ಮಾಡ್ಯೂಲ್‌ಗಳನ್ನು ಬಿಡುಗಡೆ ಮಾಡಿದೆ. ವೇಳಾ ಪಟ್ಟಿ ಕೆಳಕಂಡಂತಿದೆ.

| | | |
|---|---|---|
| 1 | 2019-20ರ ರೆಗ್ಯೂಲರ್ ತಂತ್ರಾಂಶ | ದಿನಾಂಕ : 15-12-2020 ರಿಂದ 31-12-2020 |
| 2 | 2019-20ರ ಅಪೀಲ್ ತಂತ್ರಾಂಶ | ದಿನಾಂಕ : 15-12-2020 ರಿಂದ 31-12-2020 |

ಇದು ಅಂತಿಮ ಅವಕಾಶವಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿನ ಶಾಲೆಗಳು ಸದರಿ ಅಂತಿಮ ದಿನಾಂಕದೊಳಗೆ ಬೇಡಿಕೆ ಸಲ್ಲಿಸಲು ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

2019-20ರ ಶುಲ್ಕ ಮರುಪಾವತಿಗೆ ಬೇಡಿಕೆ ಸಲ್ಲಿಸಲು ಮತ್ತು 2019-20ರ ಅಪೀಲಿಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖ(1) ಮತ್ತು (5)ರ ಸುತ್ತೋಲೆಗಳಲ್ಲಿ ತಿಳಿಸಿದ್ದು ಅದರಂತೆ ಕ್ರಮವಹಿಸುವುದು.

ಆಯುಕ್ತರು
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)
ನೃಪತುಂಗ ರಸ್ತೆ, ಬೆಂಗಳೂರು

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ

ಪು.ತಿ.ನೋ

2. ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿ_ ಸೂಕ್ತ ಕ್ರಮಕ್ಕಾಗಿ
3. ಹಿರಿಯ ಸಹಾಯಕ ನಿರ್ದೇಶಕರು, ಇ ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಹಿರಿಯ ಕಾರ್ಯಕ್ರಮಾಧಿಕಾರಿಗಳು/ಪ್ರೋಗ್ರಾಮರ್ಸ್, ಎಸ್.ಎ.ಟಿ.ಎಸ್. ವಿಭಾಗ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಅಲ್ಪ ಸಂಖ್ಯಾತವಲ್ಲದ ಅನುದಾನರಹಿತ ಖಾಸಗಿ ಶಾಲಾ ಮುಖ್ಯಸ್ಥರು/ಆಡಳಿತ ಮಂಡಳಿಯವರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ